ಸದನದಲ್ಲಿ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೊಂದನೆಯ ಅಧಿವೇಶನ

ಶುಕ್ರವಾರ, ದಿನಾಂಕ: 25ನೇ ಸೆಪ್ಟಂಬರ್, 2020

ವಕ್ಫ್ ಮಂಡಳಿಯ ವ್ಯಾಪ್ತಿಗೆ ಬರುವ ಜಮೀನಿನ ಬಗ್ಗೆ

ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು)-

61 (800) ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೀದರ್ ಜಿಲ್ಲೆಯಲ್ಲಿ ವಕ್ಫ್ ಮಂಡಳಿಗೆ ಸೇರಿದ ಜಮೀನು ಎಷ್ಟು; ಅದರಲ್ಲಿ ಎಷ್ಟು ಎಕರೆ ಜಮೀನನ್ನು ಒತ್ತುವರಿ ಮಾಡಲಾಗಿದೆ; (ಮಾಹಿತಿ ನೀಡುವುದು)

(ಆ) ಒತ್ತುವರಿಯಾದ ಭೂಮಿಯಲ್ಲಿ ಎಷ್ಟು ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ; ಎಷ್ಟು ಎಕರೆ ಭೂಮಿಗೆ ಇಲಾಖೆಯಿಂದ ಸುತ್ತುಗೋಡೆಯನ್ನು ನಿರ್ಮಿಸಲಾಗಿದೆ;

(ಇ) ಒತ್ತುವರಿಯಾಗಿದ್ದಲ್ಲಿ ಒತ್ತುವರಿಯಾದ ಜಮೀನನ್ನು ಹಿಂಪಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು; ಒತ್ತುವರಿ ಮಾಡಿದ್ದವರ ವಿರುದ್ಧ ಸರ್ಕಾರ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿದೆಯೇ; (ಒತ್ತುವರಿ ಮಾಡಿದವರ ಹೆಸರು ಮತ್ತು ಜಮೀನಿನ ಬಗ್ಗೆ ಸಂಪೂರ್ಣ ವಿವರವನ್ನು ನೀಡುವುದು)

(ಈ) ವಕ್ಫ್‌ಗೆ ಸೇರಿದ ಎಷ್ಟು ಭೂಮಿಯಲ್ಲಿ ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸಲಾಗಿದೆ; ಅದರ ವಾರ್ಷಿಕ ಆದಾಯ ಎಷ್ಟು; ಈ ಆದಾಯವು ಸರ್ಕಾರದ ಖಜಾನೆಗೆ ಬರುತ್ತಿದೆಯೇ; ಅಥವಾ ವಕ್ಫ್ ಮಂಡಳಿಗೆ ಸೇರುತ್ತಿದೆಯೇ?